# ಬುಡಬುಡಿಕೆಯವನು

ಇವನಿಗೆ ತಟ್ಟನೆ ಎಚ್ಚರಾಯಿತು. ರಾತ್ರಿ ಕೆಟ್ಟದೊಂದು ಇಂಗ್ಲಿಷ್ ಕಾದಂಬರಿ ಓದಿಕೊಳ್ಳುತ್ತ ಹಾಗೇ ನಿದ್ದೆ ಹೋದವನಿಗೆ ಬರೀ ಕೆಟ್ಟ ಕನಸುಗಳೇ. ಕಣ್ಣರೆಪ್ಪೆಗಳು ಮುಗಿಯದ ನಿದ್ದೆಯಿಂದ ಅಂಟಿಕೊಳ್ಳುತ್ತಿದ್ದರೆ ತನ್ನ ದುಸ್ವಪ್ನದೊಳಗಿನಿಂದ ಅಕರಾಳ–ವಿಕರಾಳ ಜೀವಜಂತುಗಳು ತನ್ನ ಇರುಕು ಕೋಣೆಯೊಳಕ್ಕೇ ಇಳಿದುಬಂದವೇನೋ ಎಂದು ಢವಢವಿಸುತ್ತಿದ್ದ ಎದೆ ಹಿಡಿದುಕೊಂಡು ಕತ್ತಲೊಳಗೇ ಎದ್ದುಕುಳಿತು ಸುತ್ತ ಮುತ್ತ ನೋಡಿದ. ಬೇಸಿಗೆಯ ದಿನದ ಕಾವು ರಾತ್ರಿಗೆ ಬೆವರಾಗಿತ್ತು. ರೂಮಿನೊಳಗೆ ಬೆಳಕು, ಮಾತು, ನಗುವಿರುವಾಗ ಸಣ್ಣದನಿಯಲ್ಲಿ ಟಿಕ್‌ಟಿಕ್ಕಿಸುತ್ತಿದ್ದ ದಪ್ಪಗಾಜಿನ ಅಲಾರ್ಮ್ ಗಡಿಯಾರದ ಮುಳ್ಳು ಕೂಡ ಕತ್ತಲ ಮೌನದೊಳಗೆ ನೆನೆದು ನೀರು ತುಂಬಿಕೊಂಡ ಬೂಟುಗಳ ನಡಿಗೆಯ ಶಬ್ದದಂತೆ ಕಚ್–ಕಚ್ ಧ್ವನಿಗಯ್ಯುತ್ತಿತ್ತು. ಅರೆತೆರೆದ ಕಿಟಕಿಯಿಂದ ದೂರದ ಯಾವುದೋ ಬೀದಿ ದೀಪದ ಚಚ್ಚೌಕಗಳ ಬೆಳಕು ಹಾಸಿಗೆಯ ಕಾಲಿನ ಕಡೆಯ ಗೋಡೆ ಮೇಲೆ ಬಿದ್ದಿತ್ತು. ಆ ಬೆಳಕಿನ ಚಿತ್ತಾರವೇ ನರಕ್ಕಿಳಿಯುವ ಕಿಟಕಿಯೇನೋ ಅನಿಸುತ್ತಿತ್ತು. ರೂಮಿನೊಳಗೆ ಬೆಳಕಿರುವಾಗ ಮುಚ್ಚಿಕೊಂಡಿರುವ ಆ ನರಕದ ಕಿಟಕಿ, ರೂಮಿನೊಳಗೆ ಕತ್ತಲಾಗುತ್ತಲೂ ಬೆಳ್ಳಗೆ ತೆರೆದುಕೊಂಡು ಎಲ್ಲ ಭಯಂಕರ ಜಂತುಗಳನ್ನು ಇವನ ರೂಮಿನೊಳಕ್ಕೆ ಕಳಿಸಿಕೊಡುವುದೇನೋ ಅನಿಸುತ್ತಿತ್ತು. ಆ ಬೆಳಕಿನ ಕಿಟಕಿಯ ಕೊಂಚ ಮೇಲೆ, ಬೆಳಕಿಗೆ ತಾಕದಂತೆ ನೇತು ಹಾಕಿದ್ದ ಗಿಟಾರು, ಗಿಟಾರಿನ ಕತ್ತಲು ತುಂಬಿದ ದೊಡ್ಡ ತೂತು, ಸ್ವಲ್ಪ ಸ್ವಲ್ಪ ಹೊಳೆಯುತ್ತಿದ್ದ ತಂತಿಗಳು, ಪಕ್ಕದಲ್ಲೇ ಹ್ಯಾಂಗರ್‌ಗೆ ನೇತುಹಾಕಿದ್ದ ಬಟ್ಟೆಗಳು, ಹ್ಯಾಂಗರ್‌ಗಳ ಕಂಬಿಯ ಮೇಲೆ ಎಲ್ಲಕ್ಕಿಂತ ಮುಂದೆ ಬಂದು ಹ್ಯಾಂಗರ್‌ನ ಮೇಲೆ ಸ್ವಲ್ಪವೇ ತೊನೆದಾಡುತ್ತಿದ್ದ ಬನಿಯನ್ನು. ಆಚೆಗೆ ಮುಕ್ಕಾಲು ಪಾಲು ತೆರೆದುಕೊಂಡ ಬಾಗಿಲು, ಬಾಗಿಲಾಚೆಗಿನ ಹಜಾರದ ಗವ್ವೆನುವ ಕತ್ತಲು. ಎಲ್ಲವನ್ನೂ ನೋಡುತ್ತ, ರಾತ್ರಿಯ ನೀರವ ಮೌನದಲ್ಲಿ ಉಂಟಾಗುತ್ತಿದ್ದ ಎಲ್ಲ ಚಲನೆಗಳಿಗೂ, ಶಬ್ದಗಳಿಗೂ ಸಹಜ–ಸ್ವಾಭಾವಿಕವಾದ ವೈ ಜ್ಞಾನಿಕವಾದ ತರ್ಕಗಳನ್ನು ಕೊಟ್ಟುಕೊಳ್ಳುತ್ತ ಸಮಾಧಾನ ಮಾಡಿಕೊಳ್ಳುತ್ತ ಹಣೆಯಮೇಲೆ ಹನಿಯಲು ತಯಾರಾಗಿದ್ದ ಬೆವರನ್ನು ತನ್ನ ಹಸ್ತದಿಂದಲೇ ಒರೆಸಿಕೊಳ್ಳುತ್ತಿದ್ದಾಗ ಕೇಳಿಸಿತು ಆ ಶಬ್ದ! ತಟ್ಟನೆ ಆದುರಿಬಿದ್ದ ಇವನ ಮೆದುಳು ಲಗುಬಗೆಯಿಂದ ಶಬ್ದದ ಮೂಲವನ್ನು ಹುಡುಕಲು ಯತ್ನಿಸುತ್ತಿದ್ದಾಗ, ಇವನಿಗೆ ತನ್ನನ್ನು ನಿದ್ರೆಯಿಂದ ಬಡಿದೆಬ್ಬಿಸಿದ್ದು ಇದೇ ಶಬ್ದವೆಂದು ಗೊತ್ತಾಯಿತು. ಮೈಮನಸನ್ನೆಲ್ಲ ಕಿವಿಗಳನ್ನಾಗಿಸಿ ಆಲಿಸಿದ, ಮತ್ತೆ ಕೇಳಿಬಂತು ಅದೇ ಶಬ್ದ. ಈ ಮಹಾನಗರಿಯ ಒಬ್ಬಂಟಿ, ಮೌನದ ಅಮವಾಸ್ಯೆಯ ರಾತ್ರಿಯಲ್ಲಿ ಕಟಕಟಿಸುವ ಬುಡಬುಡಿಕೆ ಶಬ್ದ!

ಈ ಹಿಂದೆ ಎರಡು ಮೂರು ಬಾರಿಯೂ ಇಂಥವೇ ರಾತ್ರಿಗಳಲ್ಲಿ ಇದೇ ಶಬ್ದಕೇಳಿ ತಲೆ ಕೆಡಿಸಿಕೊಂಡು ಎದ್ದುಕುಳಿತಿದ್ದ. ಅಮವಾಸ್ಯೆಯ ರಾತ್ರಿಗಳಲ್ಲಿ ಬಡಿದುಕೊಳ್ಳುವ ಬುಡಬುಡಿಕೆಯ ಶಬ್ದದ ಅರ್ಥ ಅವನಿಗೆ ಗೊತ್ತಿತ್ತು. ಆದರೆ ಇಂಥ ಮಹಾನಗರಿಯಲ್ಲೂ ಇದು ನಡೆದೀತು ಅಂತಾ ಅವನಿಗೆ ನಂಬಲಾಗಿರಲಿಲ್ಲ. ಯಾವಾಗಲೋ ತನ್ನ ಚಿಕ್ಕಜ್ಜಿಯನ್ನು ನೋಡಲು ತನ್ನೂರಿಗೆ ಹೋಗಿದ್ದಾಗ, ಬಹು ವಿಸ್ಮಯದಿಂದ ಈ ವಿಷಯ ಹೇಳಿದಾಗ ಅವಳು ಪಿಸುಗುಟ್ಟಿದ್ದಳು,

“ಹೌದು, ಶಕುನ ಅನ್ನೋದು ಎಲ್ರುಗೂ ಇರಲ್ವಾ? ಹಳ್ಳೀಲಿದ್ರೇನು, ಪ್ಯಾಟೆಲಿದ್ರೇನು?”

“ಆದ್ರೂ ಸಿಟಿನಲ್ಲೂ ಜಾಬು ಕಟ್ತಾರಾ?”

“ಕಟ್ದೇ ಏನು? ಆ ದಾಸಯ್ಯಗಳಿಗೆ ಅದೇ ಕುಲ ಕಸುಬಲ್ವಾ? ಅವ್ರು ಬಿಡ್ತೀವಿ ಅಂದ್ರೂ ಹಾಲಕ್ಕಿ ಶಕುನ ನುಡಿಯಾದು ಬಿಡ್ತೈತಾ? ಅದು ನುಡಿದ್ ಮ್ಯಾಲೆ ಅವ್ರು ನುಡಿದ್ದುದ್ದ ಸಾರಲೇ ಬೇಕು!”

“ಹಾಗಾ?”

“ಹೂಂ ಮತ್ತೆ. ಬುಡಬುಡ್ಕೆ ದಾಸಯ್ಯಗಳಿಗೆ ಅದೇ ಕರ್ಮ. ಅಮವಾಸ್ಯೆ ದಿನ ರಾತ್ರಿ ಸ್ಮಶಾನ್ದಾಗೆ ಬರೇ ಮೈನಾಗೆ ಇದ್ದು ರಕ್ತ ಮಾಂಸ ಅಂತ್ವೇಳಿ, ಭೂತೇಶ್ವರನ್ ಪೂಜೆ ಮಾಡಿದ್ರೆ, ಕೊನೆಗೆ ಹಾಲಕ್ಕಿ ಕಿಚಕಿಚ ಅಂದ್ಕೊಂಡು ಬಂದು ಅವನ ಕಿವಿಯಾಗೆ ಊರಿನಲ್ಲಿ ಯಾರ್ ಮನೆನಾಗೆ ಏನಾಗುತ್ತೆ ಅಂತ್ವೇಳಿ, ಹೋಗು ಸಾರ ಹಾಕೋಗು ಅಂತದಂತೆ!”

“ಅವ್ರು ಹಾಗೇ ಬರೀ ಬೆತ್ತಲಾಗಿ ಊರೊಳಿಕೆ ಬಂದ್ ಬಿಡ್ತಾರಾ?”

“ಮತ್ತಿನ್ನೇನು? ಹಂಗೆಲ್ಲ ಅಮವಾಸ್ಯೆ ಜಾಬ್ ಕಟ್ಟುವಾಗ ಅವ್ರು ಹಂಗೇ ನಿರ್ವಾಣವಾಗೇ ಇರೋದೇಯ.”

“ಹೌದಾ? ನಮ್ಮ ರೂಮಿನ ನಾಲ್ಕು ಬೀದಿಯಾಚೆ ಒಂದು ಸ್ಮಶಾನ ಇರೋದು ನಿಜ, ನೋಡಿದೀನಿ. ಆದ್ರೆ ಸಿಟಿಯೊಳಗೂ ಅವ್ರು ಅಷ್ಟೇ ಕಟ್‌ನಿಟ್ಟಾಗಿ ಜಾಬ್‌ಕಟ್ತಾರೆ ಅಂತೀಯಾ?”

“ಏಯ್! ಹಂಗೇ ಏನಾರ ಪರೀಕ್ಷೆ ಮಾಡೋಕಂತ ಹೋಗೀಯಾ! ಅವ್ರು ರಾತ್ರಿ ಬುಡಬುಡ್ಕೆ ಬಡ್ಕೊಂಡ್ ಬಂದು ಯಾರ್ಯಾರ್ದೋ ಮನೆಗಳ ಮುಂದೆ ನಿಂತು ಶಕುನ ಹೇಳ್ತಿದ್ದಾಗ ನಾವೇನಾದ್ರೂ ಕಿಟಕಿ ತೆಕ್ಕೊಂಡೋ, ಬಾಗ್ಲು ತಕ್ಕೊಂಡೋ ಹೊರಗೋಗಿ ಆ ಸ್ಥಿತೀಲಿ ಅವ್ರುನ್ ನೋಡಿದ್ರೆ ಅಷ್ಟೇ. ಹೆಂಗಸ್ರಿಗೆ ನೀರ್ ನಿಲ್ತದಂತೆ; ಬಸುರಿ ಹೊಟ್ಟೆ ಕರಗ್ತದಂತೆ; ಗಂಡಸರಿಗೆ ತಲೆಸುತ್ತುಬಂದು ಎದೆಯೆಲ್ಲ ಉರ್ದು ತಲೆಯೊಡ್ಕೊಂಡ್ ರಕ್ತ ಕಾರ್ಕಂಡ್ ಸಾಯ್ತಾರಂತೆ; ಮಕ್ಳು ನೋಡಿದ್ರೆ ಕಣ್ಣುಕುರ್ಡಾಗ್ತಾವಂತೆ. ನಮ್ಮೂರ್ನಾಗೇ ನೋಡಿಲ್ವಾ ಅಮಯ್ಯಕ್ಕನ್ ಮಗಳ್ ಹೊಟ್ಟೆ ಇಳ್ದಿದ್ದು? ಹುಡ್ಗಾಟಿಕೆ ಅಂತಾ ಅದ್ನೆಲ್ಲ ನೋಡಕೋಗಿಯೇ. ಬುಡಬುಡ್ಕೆ ಶಬ್ದ ಕೇಳುದ್ ಕೂಡ್ಲೇ ಕಿವಿ ಮುಚ್ಕಂಡ್ ಮಲಿಕ್ಕಬಿಡ್ಬೇಕು. ಹೆಂಗಿದ್ರೂ ದಾಸಯ್ಯ ಬೆಳಿಗ್ಗೆ ಬರ್ತಾನಲ್ಲ, ಕಾಳು ಕಡಿ ಇಸ್ಕೊಂಡೋಗೋಕೆ–ಆವಾಗ ಮತ್ತೆ ಅವೇ ಮನೆಗಳ ಮುಂದೆ ನಿಂತು ರಾತ್ರಿ ಹೇಳಿದ್ದುದ್ದನ್ನೇ ಅರ್ಥವಾಗೋ ಭಾಷೇಲಿ ಹೇಳ್ತಾನೆ”

“ಅಂದ್ರೇ ರಾತ್ರಿ ಅವ್ನು ಹೇಳೋದು ಗೊತ್ತಾಗೋಲ್ವಾ?”

“ಹೆಂಗೊತ್ತಾಗುತ್ತೆ? ಅದೆಲ್ಲ ಪಿಶಾಚಿ ಭಾಷೆ. ಪಾರ್ವತಿ–ಪರಮೇಶ್ವರ ಜಗತ್ತಿನ ಆಟ ಆಡ್ತಾ ಆದೇಶದಲ್ಲಿ ಹಂಗ್ ಮಾಡಾಣಾ, ಈ ಊರಿನಲ್ಲಿ ಹಿಂಗ್ ಮಾಡಾಣ ಅಂತ ಮಾತಾಡ್ಕತ ಇರೋದನ್ನ ಭೂತಗಣಗಳು ಕೇಳುಸ್ಕ ಬಂದು ಪ್ರಪಂಚದಲ್ಲಿರೋ ಹಾಲಕ್ಕಿಗಳಿಗೆಲ್ಲ ಹೇಳ್ತವಂತೆ, ಹಾಲಕ್ಕಿಗಳು ದಾಸಯ್ಯಗಳಿಗೆ ಹೇಳಿ, ಊರೆಲ್ಲ ಸಾರಬೇಕು ಅಂತಾವಂತೆ. ಅದು ಸರಿಯಾಗ್ ಸಾರ್ತಾರೋ ಇಲ್ವೋ ಅಂತಾ ನೋಡೋಕೆ ರಾತ್ರಿ ಪಿಶಾಚಿ ಭಾಷೆ. ಅವ್ರು ಸುಳ್ಳು–ಪಳ್ಳು ಸೇರುಸ್ದೇ ತಪ್ಪು ಮಾಡ್ದೇ ಮನೆ ಮನೆ ಮುಂದೆ ನಿಂತು, ಈ ಮನೇಲಿ ಏನಾಗುತ್ತೆ, ಆ ಮನೇಲಿ ಏನಾಗುತ್ತೆ ಅಂತೆಲ್ಲ ಸರಿಯಾಗಿ ಹೇಳ್ಬೇಕು…”

ಈಗ ಈ ಮಹಾನಗರಿಯ, ತನ್ನ ಕಿರಿದಾದ ಮೊದಲಂತಸ್ತಿನ ಬಾಡಿಗೆ ಮನೆಯ ಕಿರಿದಾದ ರೂಮಿನೊಳಗೆ, ಹಾಸಿಗೆಯ ಮೇಲೇ ಕುಳಿತು ಎಲ್ಲವನ್ನೂ ನೆನಪಿಸಿಕೊಳ್ಳುತ್ತಿದ್ದವನಿಗೆ ಮತ್ತೆ ಬುಡಬುಡಿಕೆಯ ‘ಕಟ ಕಟ ಕಟ ಕಟರ್ರ್… ಕಟರ್ರ್…’ ಶಬ್ದ ಕೇಳಿಬಂತು. ಬುಡಬುಡಿಕೆಯವ ಮನೆಯ ಹತ್ತಿರವೇ ಬಂದಂತಾಗಿ ಶಬ್ದವೂ ಹೆಚ್ಚಾಯಿತು. ‘ಹೌದಲ್ಲ, ದಿನಾ ತನ್ನ ರೂಮ್‌ನ ಓಣಿ, ಪಕ್ಕದ ಓಣಿಗಳಲ್ಲೆಲ್ಲ ಎಷ್ಟೊಂದ್ ಬೀದಿನಾಯಿಗಳು ಭೋರ್ಗುಡುತ್ತಿದ್ದವು, ಇವತ್ತು ಒಂದೂ ನಾಯಿ ಬೊಗಳುತ್ತಿಲ್ಲ! ತಾನೇ ಎಷ್ಟೋ ಸಾರಿ ಅರೆರಾತ್ರಿಯ ಪಾರ್ಟಿಗಳ ಮುಗಿಸಿ ಎರಡು–ಮೂರಕ್ಕೆಲ್ಲ ಬಂದಾಗ ನಾಯಿಗಳಿಗೆ ಸಿಕ್ಕು ಹಾಕಿಕ್ಕೊಂಡಿದ್ದಿದೆ. ಸಧ್ಯ ಒಮ್ಮೆಯೂ ಕಚ್ಚಿಸಿಕೊಳ್ಳದಂತೆ ಬಚಾವಾಗಿ ಬಂದಿದ್ದಾಗಿದೆ. ಇವತ್ತೇನಾಗಿದೆ ಈ ನಾಯಿಗಳಿಗೆ?’

‘ಕಟ ಕಟ ಕಟ ಕಟರ್ರ್… ಕಟರ್ರ್…’ ಬುಡಬುಡಿಕೆಯ ಶಬ್ದ ನಿಂತಾಗ, ಇದುವರೆಗೂ ಈ ದಾಸಯ್ಯಂದಿರು (ಜಾಬ್ ಕಟ್ಟುವುದನ್ನು) ಹೇಳುವುದನ್ನು ಕೇಳಿಸಿಕೊಳ್ಳದ ಇವನು ಕುತೂಹಲದಿಂದ ಅತ್ತಲೇ ಕಿವಿಗೊಟ್ಟ. ರಾತ್ರಿಯ ನೀರವ ಮೌನದಲ್ಲಿ, ಕತ್ತಲಲ್ಲಿ ಬೀದಿಯ ಯಾರದೋ ಮನೆಯೆದುರು ನಿಂತು, ದೃಢವಾದ ಧ್ವನಿಯಲ್ಲಿ, ವೇಗವಾಗಿ, ಅಸ್ಖಲಿತವಾಗಿ, ಏದುಸಿರಿನಲ್ಲಿ ಬುಡಬುಡಕೆಯವನು ಮಾತನಾಡತೊಡಗಿದ, ಇವನಿಗೆ ನಿರಾಸೆಯಾಯಿತು, ಕೇವಲ “ಅಂಗಾಳ ಪರಮೇಶ್ವರಿ, ಭೂತನಾಥ, ತಿರುಕರುಮಾರಿಯಮ್ಮ” ಮುಂತಾದ ಪದಗಳ ಬಿಟ್ಟರೆ ಸಂಪೂರ್ಣ ತಮಿಳಿನಲ್ಲಿದ್ದ ಇತರೆ ಮಾತುಗಳ್ಯಾವುವೂ ಅರ್ಥವಾಗಲಿಲ್ಲ. ಕೊನೆಗೆ ಅದು ಸಂಪೂರ್ಣ ತಮಿಳೂ ಅಂತ ಅನಿಸಲಿಲ್ಲ, ಅದರಲ್ಲಿ ಎಲ್ಲ ಭಾಷೆಗಳೂ ಇವೆ ಅನಿಸಿತು. ಸುಮ್ಮನೆ ಕೇಳಿಸಿಕೊಳ್ಳುತ್ತ ಕುಳಿತವನಿಗೆ ಒಂದು ಹುಚ್ಚುಯೋಚನೆ ಹೊಳೆಯಿತು. ಈಗ ಥಟ್ಟನೆ ಎದ್ದು ಮುಂದಿನ ಬೀದಿಗೆ ಚಾಚಿಕೊಂಡಿರುವ ತನ್ನ ರೂಮಿನ ಬಾಲ್ಕನಿಯ ಬಾಗಿಲು ತೆರೆದು ಅವನನ್ನು ನೋಡಿಬಿಟ್ಟರೆ?

ತನ್ನ ಯೋಚನೆಗೆ ತನ್ನ ಎದೆಯೇ ಹಾರಿಬಿದ್ದಂತಾಗಿ ನೆಟ್ಟಗೆ ಕುಳಿತ. ಏನು ಮಾಡುವುದು, ಹಾಗೆ ನೋಡಲೇ ಬೇಕಿದ್ದರೆ ಈಗಲೇ ತೆರೆದುಕೊಂಡಿರುವ ಕಿಟಕಿ ಮೂಲಕವೇ ನೋಡಬಹುದಲ್ಲ ಅನಿಸಿತು. ಹೇಗಿದ್ದರೂ ರೂಮಿನೊಳಗೆ ಬೆಳಕಿಲ್ಲ. ತಾನು ಕಿಟಕಿಯಲ್ಲಿ ನಿಂತು ನೋಡಿದ್ರೂ ಬುಡಬುಡಿಕೆಯವನಿಗೆ ಗೊತ್ತಾಗುವುದಿಲ್ಲ, ನೋಡಲು ಇದೇ ಆಪತ್ತಿಲ್ಲದ ದಾರಿ ಅನಿಸಿತು. ‘ಆಪತ್ತು? ಏನು ನೀನು ಹೇಳುವುದು?…’ ಅವನ ಮನಸ್ಸು ವಾದಕ್ಕಿಳಿಯಿತು, ‘…ಇದು ಇಪ್ಪದೊಂದನೇ ಶತಮಾನ ಮಗೂ. ಆಪತ್ತೂ ಇಲ್ಲ, ವಿಪತ್ತೂ ಇಲ್ಲ. ಆಗೀಗ ನಾನು ದೇವರನ್ನು ನಂಬೋದಿಲ್ಲ, ದೆವ್ವಗಳಿಗೆ ಹೆದರೋದಿಲ್ಲ ಅಂತೆಲ್ಲ ಸಮಾಧಾನ ಮಾಡಿಕೊಳ್ತಾ ಇರ್ತೀಯಲ್ಲ, ಈಗೆಂಥಾ ಹೆದರಿಕೆ? ಎಲ್ಲವನ್ನೂ ವೈಜ್ಞಾನಿಕವಾದ ಕಾರಣಗಳಿಗೆ–ತರ್ಕಗಳಿಗೆ ಒರೆಹಚ್ಚಿನೋಡಬೇಕಲ್ಲವೇ? ಏಳು, ಎದ್ದೇಳು, ಧಡಾರನೇ ಬಾಲ್ಕನಿ ಬಾಗಿಲು ತೆರೆದು ನೋಡಿಬಿಡು. ನೀನು ಇದೂವರೆಗೂ ಕೇಳಿದ್ದು, ನಂಬಲು ಕಷ್ಟಪಟ್ಟಿದ್ದು ನಿಜವೋ ಸುಳ್ಳೋ ಗೊತ್ತಾಗೇಬಿಡಲಿ, ಏಳು, ಏಳು!’

ಅವನು ಮನಸ್ಸಿನೊಡನೆ ವಾದಕ್ಕಿಳಿಯಲು ಆಗದೇ ಕಾಲಮೇಲಿದ್ದ ಹೊದಿಕೆ ಸರಿಸಿ ಎದ್ದ. ಇಷ್ಟೆಲ್ಲ ಆಗುವಷ್ಟರಲ್ಲಿ ಬುಡಬುಡಕೆಯವನು ಅವನ ಮನೆಯ ದಾಟಿ ಮುಂದಕ್ಕೆ ಸಾಗುತ್ತಿದ್ದ ಅನಿಸುತ್ತೆ, ಅವನ ಮಾತು–ಬುಡಬುಡಕೆಯ ಶಬ್ದ ಹಂತ

ಹಂತವಾಗಿ ಕಡಿಮೆಯಾಗುತ್ತಿತ್ತು. ಅವನ ಮನಸ್ಸು 'ಏಳು, ಏಳು, ಬಾಗಿಲು ತೆಗೀ, ಬೇಗ. ನಿನಗೆ ಅವನನ್ನು ನೋಡಿ-ಅವನಿಗೆ ನಿನ್ನ ನೋಡಿ ಏನನ್ನಿಸುತ್ತೋ ನೋಡಿಬಿಡು. ನಡೀ, ನಡೀ' ಅನ್ನುತ್ತಿದ್ದರೂ ಮೆಲ್ಲನೆ ಸದ್ದಾಗದಂತೆ, ಮುಂದಿನ ಬೀದಿಗೆ ಚಾಚಿಕೊಂಡಿದ್ದ ಬಾಲ್ಕನಿಯ ಬಾಗಿಲ ಅಗಳಿ ಸರಿಸಿ, ಮೆತ್ತಗೆ ಬಾಗಿಲು ಹಿಂದಕ್ಕೆಳೆದುಕೊಂಡ. ಬಾಗಿಲಿನಿಂದ ಮೆಲ್ಲನೆ ಹೊರಬಂದು ಬಾಲ್ಕನಿಯಲ್ಲಿ ನಿಂತು, ಬಾಲ್ಕನಿಯ ಕಬ್ಬಿಣದ ಕಟಾಂಜನವನ್ನು ಗಟ್ಟಿಯಾಗಿ ಕೈಗಳಲ್ಲಿ ಆಧಾರವಾಗಿ ಹಿಡಿದುಕೊಂಡು ಕೆಳಗೆ ಬೀದಿಯ ಕಡೆ ಕಣ್ಣು ಹಾಯಿಸಿದ.

ಬುಡಬುಡಿಕೆಯವನು ಅದೇ ಬೀದಿಯಲ್ಲಿ ಆಗಲೇ ಮುಂದೆ ಹೋಗಿದ್ದ. ಬೀದಿಯ ಕೊನೆಯ ತಿರುವಿನಲ್ಲಿದ್ದ ಬೀದಿದೀಪವನ್ನು ಬಿಟ್ಟರೆ ಇಡೀ ಬೀದಿ ಕತ್ತಲಲ್ಲಿತ್ತು. ಕತ್ತಲಲ್ಲಿ ಸ್ವಲ್ಪ ದೂರದಲ್ಲಿ ಅತ್ತ ಕಡೆಗೆ ಚಲಿಸುತ್ತಿದ್ದ ಕಪ್ಪು ನೆರಳಿನಂತಹ ಆಕೃತಿ ಕಾಣಿಸಿತು. ಅದರ ಮುಖ, ದೇಹಚರ್ಯೆಗಳು, ಉಡುಗೆಯೇನೋ ಗೊತ್ತಾಗಲಿಲ್ಲ. ಎಡ ಹೆಗಲಲ್ಲಿ ಜೋಳಿಗೆಯೇನೋ ಇದ್ದಂತಿತ್ತು. ಎತ್ತಿದ್ದ ಬಲಗೈಯಲ್ಲಿ ಬುಡಬುಡಿಕೆ! ಇವನಿಗೆ ತಾನು ನೋಡಿದ್ದು ಬುಡಬುಡಿಕೆಯವನಿಗೆ ಗೊತ್ತಾಗುವುದೇನೂ ಬೇಡ, ತಾನು ಸಣ್ಣವನಿದ್ದಾಗಿನಿಂದ ಕೇಳಿದ್ದು, ಹೆದರಿಕೆಯಲ್ಲಿ ನಂಬಿಕೊಂಡಿದ್ದು ನಿಜವೋ ನೋಡಿಬಿಡೋಣ ಅನಿಸಿತು. ದೂರಕ್ಕೆ ನಿರ್ವಾಣ ಸ್ಥಿತಿಯಲ್ಲಿರಬಹುದೇನೋ ಎನ್ನುವಂತೆ ಬಟ್ಟೆ ಸುತ್ತಿಕೊಳ್ಳದ ಬುಡಬುಡಿಕೆಯವನ ಕಾಲುಗಳ ನೆರಳೂ ಕಾಣಿಸುತ್ತಿತ್ತು. ಎರಡೇ ನಿಮಿಷ, ಇನ್ನೇನು ಬೀದಿಯ ಕೊನೆ ತಲುಪಿಬಿಡುತ್ತಾನೆ, ಅಲ್ಲಿ ಕೊನೆಯ ತಿರುವಿನಲ್ಲಿ ಬೀದಿದೀಪವಿದೆ, ಆ ಬೆಳಕಿನ ಅಡಿಯೇ ಅವನು ನಡೆದುಹೋಗಬೇಕು, ಗೊತ್ತಾಗೇ ಬಿಡುತ್ತದೆ! ಎಂದು ಭಯಾತಂಕಗಳಿಂದ ನಾಗಾಲೋಟಕ್ಕೇರಿದ್ದ ಹೃದಯಕ್ಕೆ ಸಮಾಧಾನ ಮಾಡುತ್ತ, ಸರಿಯಾಗಿ ಕಾಣಲಿ ಅಂತಲೋ ಏನೋ ಕಬ್ಬಿಣದ ಕಟಾಂಜನವನ್ನು ಕೈಗಳಲ್ಲಿ ಭದ್ರವಾಗಿ ಹಿಡಿದುಕೊಂಡೇ ಇನ್ನೂ ಸ್ವಲ್ಪ ಮುಂದಕ್ಕೆ ಬಾಗಿದ, ಇನ್ನೇನು ಒಂದೇ ನಿಮಿಷ ಅಷ್ಟೇ!

ಥಟ್ಟನೆ ಮಿಂಚುಹೊಳೆದಂತೆ ಇವನ ತಲೆಯೊಳಗೆ ಛಳಕ್ಕನೆ ನೋವಿನ ಎಳೆ ವ್ಯಾಪಿಸಿತು. ಹಣೆಯ ಭ್ರೂಮಧ್ಯ ಭಾಗದಲ್ಲಿ ಯಾರೋ ಮೊಳೆ ಹೊಡೆದಂತೆ ಸಹಿಸಲಾಗದ ಉರಿ ಶುರುವಾಯಿತು. ಯಾರೋ ಬಾಲ್ಕನಿಯಿಂದ ಮುಂದಕ್ಕೆ ಇವನನ್ನು ಎಳೆಯುತ್ತಿರುವಂತೆನಿಸಿ, ತಲೆ ತಿರುಗಿ ಆಯ ತಪ್ಪಿದಂತಾಗಿ ತಟ್ಟನೇ ತಲೆಯನ್ನು ಹಿಂದಕ್ಕೆಳೆದುಕೊಳ್ಳುತ್ತ ನೇರವಾಗಿ ಕತ್ತೆತ್ತಿನೋಡಿದ, ಆ ನೋವು, ಗಾಬರಿ, ಆತಂಕದಲ್ಲಿ ಇವನಿಗೆ ಕಣ್ಣಮುಂದೆ, ಬರೀ ಅರ್ಧ ಅಂಗುಲ ದೂರದಲ್ಲಿ, ಬಾಲ್ಕನಿಯ ಮೇಲೆ, ತಲೆಯೆತ್ತರದಲ್ಲೇ ಹಾದುಹೋಗಿದ್ದ ವಿದ್ಯುತ್ ತಂತಿ ಕಂಡಿತು. ಗಡಗಡ ನಡುಗಿ, ಬಾಲ್ಕನಿಯೊಳಗೇ ಕುಸಿದು ಕುಳಿತ. ಯಾವಾಗ ಬಾಲ್ಕನಿಗೆ ಬಂದರೂ ಎಚ್ಚರಾಗಿಯೇ ಇರುತ್ತಿದ್ದ, ಬೇರೆ ಸ್ನೇಹಿತರು ಬಂದು ಬಾಲ್ಕನಿಗೆ ನುಗ್ಗಿದರೂ ಅಲ್ಲೇ ಹಾದುಹೋಗಿದ್ದ ಆ ತಂತಿಯ ಬಗ್ಗೆ ಅವರಿಗೆ ಎಚ್ಚರಿಕೆ ಕೊಡುತ್ತಿದ್ದವನು ಇವತ್ತು ರಾತ್ರಿ ಅದರ ಇರುವಿಕೆಯನ್ನು-ಪರಿಧಿಯನ್ನು ಮರೆತುಬಿಟ್ಟಿದ್ದ!

'ಕಟ ಕಟ ಕಟ ಕಟರ್ರ್... ಕಟರ್ರ್...' ಬುಡಬುಡಿಕೆಯ ಶಬ್ದ ಮೆತ್ತಗಾಗುತ್ತಿತ್ತು. ಆ ಶಕುನದವನು ಈಗಾಗಲೇ ಈ ಬೀದಿಯಂಚಿನ ತಿರುವು ದಾಟಿ, ಬೀದಿದೀಪದ ಬೆಳಕಿನ ಅಡಿಯೇ ಹಾದು, ಇನ್ನೊಂದು ಬೀದಿ ಹೊಕ್ಕಿರಬೇಕು. ಇವನಿಗೆ ನಖಶಿಖಾಂತ ಬೆವರು ಕಿತ್ತುಕೊಂಡಿತು, ಬೆನ್ನ ಹುರಿಯುದ್ದಕ್ಕೂ ನಡುಗು ವ್ಯಾಪಿಸಿತು. ಉರಿಯುತ್ತಿದ್ದ ಹಣೆ ಮುಟ್ಟಿನೋಡಿಕೊಂಡ, ಏನೂ ಆಗಿರಲಿಲ್ಲ. ಎರಡೂ ಕೈಗಳಲ್ಲಿ ತಲೆಹಿಡಿದುಕೊಂಡು, ಹಾಗೇ ಕಡಿದು ಹಾಕಿದವನಂತೆ ಎಷ್ಟು ಹೊತ್ತು ಕುಳಿತಿದ್ದನೋ ಮೆಲ್ಲನೆ ಮೇಲಕ್ಕೆದ್ದ. ಬುಡಬುಡಿಕೆಯ ಶಬ್ದ ರಾತ್ರಿಯ ಕತ್ತಲಲ್ಲಿ ಹೂತುಹೋಗಿತ್ತು. ನಡುಗುತ್ತಲೇ ಎದ್ದು ಬೀದಿಯೆಡೆಗೆ ಕಣ್ಣೂ ಹಾಯಿಸದೇ, ತಡವರಿಸುತ್ತ ರೂಮಿನೊಳಕ್ಕೆ ಬಂದು, ಬಾಲ್ಕನಿಯ ಬಾಗಿಲು ಧಡಾರನೆ ಹಾಕಿ, ಲಗುಬಗೆಯಿಂದ ಅಗುಳಿಜಡಿದ. ತೂರಾಡುವ ಹೆಜ್ಜೆಗಳಲ್ಲಿ ಬಂದು ಹಾಸಿಗೆಯ ಮೇಲಕ್ಕೆ ಬುಡ ಕಡಿದ ಬಾಳೇಗಿಡದಂತೆ ಬಿದ್ದವನಿಗೆ ಬೆಂಬಿಡದ ದುಸ್ವಪ್ನಪೂರಿತ ನಿದ್ರೆ, ಬೆಳಗಾಗುವಷ್ಟರಲ್ಲಿ ಮೈಯೆಲ್ಲ ಸುಟ್ಟು ಕುದಿಯುವಂತಹ ಕೆಂಡಾಮಂಡಲ ಜ್ವರ!

## ಹ್ಯಾವ್ ಎ ನೈಸ್ ಡೇ

**ಶಿವಕುಮಾರ ಕೆ. ಎಸ್. ks_shivu@yahoo.com**